KAVP500018812024

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಸಿಂದಗಿ.

ಉಪಸ್ಥರು: ಶ್ರೀ ನಾಗೇಶ ಕೆ. ಮೊಗೇರ.,
ಬಿ.ಕಾಂ, ಎಲ್ .ಎಲ್.ಎಮ್
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು, ಸಿಂದಗಿ.

<u>ಆರ್.ಎ.ನಂ. 56/2024</u>

<u>ದಿನಾಂಕ 1 ನೇ ಜುಲೈ -2026.</u>

<u>ಮೇಲ್ಮನವಿದಾರರು/ಅರ್ಜಿದಾರರು</u>

1. ಕಲ್ಲಪ್ಪ ತಂ.ಗುರುಲಿಂಗಪ್ಪ ಹಡಪದ
(ಮೃತರಾಗಿದ್ದು , ಇವರ ವಾರಸುದಾರರು )

1 ಎ. ಶಾಂತಾಬಾಯಿ ಗಂ.ಕಲ್ಲಪ್ಪ ಹಡಪದ,
ವಯಾ ಃ 40 ವರ್ಷ , ಉಃ ಮನೆಕೆಲಸ,
ಸಾಃ ಜಾಲವಾದ , ತಾಃ ದೇವರಹಿಪ್ಪರಗಿ,
ಜಿಃ ವಿಜಯಪುರ.

1 ಬಿ. ಮಂಜುಳಾ @ನಿರ್ಮಲಾ ಗಂ.ಮಲ್ಲಪ್ಪ ಹಡಪದ,
ವಯಾ ಃ 30 ವರ್ಷ , ಉಃ ಮನೆಕೆಲಸ,
ಸಾಃ ಜಾಲವಾದ , ತಾಃ ದೇವರಹಿಪ್ಪರಗಿ,
ಜಿಃ ವಿಜಯಪುರ.

1 ಸಿ. ಮಹಾದೇವಿ ಗಂ.ರಮೇಶ ಹಡಪದ,
ವಯಾ ಃ 25 ವರ್ಷ , ಉಃ ಮನೆಕೆಲಸ,
ಸಾಃ ಸಾತಿಹಾಳ , ತಾಃ ಬಸವನಬಾಗೇವಾಡಿ,
ಜಿಃ ವಿಜಯಪುರ.

1 ಡಿ. ಮಹಾಂತೇಶ ತಂ. ಕಲ್ಲಪ್ಪ ಹಡಪದ,
ವಯಾ ಃ 24 ವರ್ಷ , ಉಃ ಒಕ್ಕಲುತನ,
ಸಾಃ ಜಾಲವಾದ, ತಾಃ ದೇವರಹಿಪ್ಪರಗಿ,
ಜಿಃ ವಿಜಯಪುರ.

1 ಇ. ರವಿ ತಂ.ಕಲ್ಲಪ್ಪ ಹಡಪದ ,
ವಯಾ ಃ 23 ವರ್ಷ , ಉಃ ಶಿಕ್ಷಣ,
ಸಾಃ ಜಾಲವಾದ, ತಾಃ ದೇವರಹಿಪ್ಪರಗಿ,
ಜಿಃ ವಿಜಯಪುರ.

(ಶ್ರೀ ಆರ್.ಡಿ.ಕೆ ವಕೀಲರು )

**ಃ ವಿರುದ್ಧ ಃ**

ಎದುರುದಾರರು

1. ಬಸಲಿಂಗಪ್ಪ ತಂ.ಜಕ್ಕಪ್ಪ ಹಡಪದ,
ವಯಾ ಃ60 ವರ್ಷ , ಉಃ ಒಕ್ಕಲುತನ,
ಸಾಃ ಜಾಲವಾದ, ತಾಃ ದೇವರಹಿಪ್ಪರಗಿ,
ಜಿಃ ವಿಜಯಪುರ.

2. ಸಂಗನಬಸಪ್ಪ ತಂ.ಜಕ್ಕಪ್ಪ ಹಡಪದ,
ವಯಾ ಃ38 ವರ್ಷ , ಉಃ ಒಕ್ಕಲುತನ,
ಸಾಃ ಜಾಲವಾದ, ತಾಃ ದೇವರಹಿಪ್ಪರಗಿ,
ಜಿಃ ವಿಜಯಪುರ.

3. ಧರೆಪ್ಪ ತಂ.ಜಕ್ಕಪ್ಪ ಹಡಪದ,
ವಯಾ ಃ 48 ವರ್ಷ , ಉಃ ಒಕ್ಕಲುತನ,
ಸಾಃ ಜಾಲವಾದ, ತಾಃ ದೇವರಹಿಪ್ಪರಗಿ,
ಜಿಃ ವಿಜಯಪುರ.

4. ಬಸಪ್ಪ ತಂ.ಜಕ್ಕಪ್ಪ ಹಡಪದ,
ವಯಾ ಃ 39 ವರ್ಷ , ಉಃ ಒಕ್ಕಲುತನ,
ಸಾಃ ಜಾಲವಾದ, ತಾಃ ದೇವರಹಿಪ್ಪರಗಿ,
ಜಿಃ ವಿಜಯಪುರ.

5. ಹೊನ್ನವ್ವ ಗಂ.ಹಂಪಣ್ಣ ಹಡಪದ,
ವಯಾ ಃ52 ವರ್ಷ , ಉಃ ಮನೆಕೆಲಸ,
ಸಾಃ ಯರನಾಳ, ತಾಃ ಬ.ಬಾಗೇವಾಡಿ,
ಜಿಃ ವಿಜಯಪುರ.

6. ರೇಣುಕಾ ಗಂ.ಬಸಲಿಂಗಪ್ಪ ಹಡಪದ,
ವಯಾ ಃ 40 ವರ್ಷ , ಉಃ ಒಕ್ಕಲುತನ,
ಸಾಃ ಜಾಲವಾದ, ತಾಃ ದೇವರಹಿಪ್ಪರಗಿ,
ಜಿಃ ವಿಜಯಪುರ.

7. ಅನಸೂಯಾ ಗಂ.ಹಣಮಂತ್ರಾಯ ಕುಲಗೇರಿ ,
ವಯಾ ಃ 41 ವರ್ಷ , ಉಃ ಒಕ್ಕಲುತನ,
ಸಾಃ ಜಾಲವಾದ, ತಾಃ ದೇವರಹಿಪ್ಪರಗಿ,
ಜಿಃ ವಿಜಯಪುರ.

(ಎ.ನಂ.1, 2,6 ರವರ ಪರವಾಗಿ ಶ್ರೀ ಎ,ಕೆ.ಕೆ ವಕೀಲರು )
(ಎ.ನಂ.7 ರವರ ಪರವಾಗಿ ಶ್ರೀ ಬಿ.ಜಿ.ಎನ್ ವಕೀಲರು )
(ಎ.ನಂ.3,4,5 ಗೈರು )

**I.A.No.I**

**ಅರ್ಜಿದಾರರು/ಮೇಲ್ಮನವಿದಾರರು**

1. ಕಲ್ಲಪ್ಪ ತಂ.ಗುರುಲಿಂಗಪ್ಪ ಹಡಪದ
(ಮೃತರಾಗಿದ್ದು , ಇವರ ವಾರಸುದಾರರು )

1 ಎ. ಶಾಂತಾಬಾಯಿ ಗಂ.ಕಲ್ಲಪ್ಪ ಹಡಪದ ಮತ್ತು ಇತರರು

**ಃ ವಿರುದ್ಧ ಃ**

**ಎದುರುದಾರರು**

ಬಸಲಿಂಗಪ್ಪ ತಂ.ಜಕ್ಕಪ್ಪ ಹಡಪದ ಮತ್ತು ಇತರರು

**<u>ಮೇಲ್ಮನವಿದಾರರು/ ಅರ್ಜಿದಾರರು ಸಿ.ಪಿ.ಸಿ ಕ್ರಮಾದೇಶ 39 ನಿಯಮ 1 ಮತ್ತು 2 ರನ್ವಯ ಸಲ್ಲಿಸಿರುವ ಮಧ್ಯಂತರ ಅರ್ಜಿ ನಂ.1 ರ ಮೇಲೆ ಆದೇಶ</u>**

ಅರ್ಜಿದಾರರು ಈ ಅರ್ಜಿಯನ್ನು ಸಲ್ಲಿಸಿ , ದಾವಾ ಆಸ್ತಿಗಳನ್ನು ಪರಭಾರೆ ಮಾಡದಂತೆ ಪ್ರತಿವಾದಿ ನಂ.1 ರಿಂದ 7 ರವರ ವಿರುದ್ದ ತಾತ್ಕಾಲಿಕ ನಿರ್ಬಂಧಕಾಜ್ಞೆಯನ್ನು ನೀಡುವಂತೆ ಪ್ರಾರ್ಥಿಸಿರುತ್ತಾರೆ.

ಅರ್ಜಿದಾರರು ತನ್ನ ಅರ್ಜಿಯ ಜೊತೆ ಇಟ್ಟಿರುವ ಪ್ರಮಾಣ ಪತ್ರದಲ್ಲಿ ವಿಚಾರಣೆ ನ್ಯಾಯಾಲಯವು ದಾವಾ ಆಸ್ತಿಗಳು ರಾಯವ್ವ ಅಥವಾ ಅವರ ಗಂಡನಾದ ಬಸಪ್ಪರವರ ಆಸ್ತಿಯಾಗಿದ್ದು, ತಾನು ಮತ್ತು ಇತರೆ ವಾದಿಯರು ಹಾಗೂ ಪ್ರತಿವಾದಿ ನಂ.1 ರಿಂದ 6 ರವರು ವಾರಸುದಾರರಾಗಿ ಪಾಲನ್ನು ಹೊಂದಿರುತ್ತೇವೆ ಎಂದು ಪ್ರಶಂಸಿಸಲು ವಿಫಲರಾಗಿರುತ್ತಾರೆ. ತಾನು ಈ ಮೇಲ್ಮನವಿಯಲ್ಲಿ ಸಫಲನಾಗುವ ಸಾಧ್ಯತೆ ಇದ್ದು , ಅನುಕೂಲತೆಯ ಒಲವು ತನ್ನ ಪರವಾಗಿ ಇದೆ. ಈ ಮೇಲ್ಮನವಿಯ ಅವಧಿಯಲ್ಲಿ ದಾವಾ ಆಸ್ತಿಗಳನ್ನು ಪರಭಾರೆ ಮಾಡುವ ಸಾಧ್ಯತೆ ಇದ್ದು, ತನಗೆ ತೊಂದರೆ ಉಂಟಾಗಲಿದೆ . ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸದಿದ್ದರೆ ತನಗೆ ತುಂಬಲಾರದ ನಷ್ಟವುಂಟಾಗುತ್ತದೆ ಎಂದು ಹೇಳುತ್ತಾ ಅರ್ಜಿಯನ್ನು ಪುರಸ್ಕರಿಸುವಂತೆ ಪ್ರಾರ್ಥಿಸಿರುತ್ತಾರೆ.

2. ಎದುರುದಾರ ನಂ.1, 2 ಮತ್ತು 6 ರವರ ಪರ ವಕೀಲರು ತಕರಾರನ್ನು ಸಲ್ಲಿಸಿರುತ್ತಾರೆ. ಸದರಿ ತಕರಾರನ್ನು ಅಳವಡಿಸಿಕೊಂಡು, ಎದುರುದಾರ ನಂ.7 ರವರು ಜ್ಞಾಪನವನ್ನು ಸಲ್ಲಿಸಿರುತ್ತಾರೆ. ಸದರಿ ತಕರಾರಿನಲ್ಲಿ ಅರ್ಜಿದಾರರು

ಈ ಮಧ್ಯಂತರ ಅರ್ಜಿಗೆ ಸರಿಯಾದ ಕಾರಣವನ್ನು ನೀಡಿರುವುದಿಲ್ಲ. ಈ ಅರ್ಜಿಯು ಕಾನೂನಿನ ಪ್ರಕಾರ ನಿಲ್ಲುವುದಿಲ್ಲ. ವಾದಿಯರು /ಮೇಲ್ಮನವಿದಾರರು ಪಾಲು ವಾಟ್ನಿಯನ್ನು ಕೋರಿ ದಾವೆಯನ್ನು ಸಲ್ಲಿಸಿದ್ದರು. ದಾವಾ ಆಸ್ತಿಯು ವಾದಿಯರ ಮತ್ತು ಪ್ರತಿವಾದಿಯರ ಅಜ್ಜಿಯ ಸ್ತ್ರಿಧನ ಆಸ್ತಿಯಾಗಿದ್ದು , ವಾದಿಯರಿಗೆ ಮತ್ತು ಪ್ರತಿವಾದಿ ನಂ.1 ರಿಂದ 4 ರವರಿಗೆ ಅಜ್ಜಿಯು ಹಕ್ಕುಬಿಟ್ಟುಕೊಟ್ಟಿದ್ದರು. ಸುಮಾರು 25-30 ವರ್ಷಗಳ ಹಿಂದೆ ವಾದಿಯರು ಮತ್ತು ಪ್ರತಿವಾದಿ ನಂ 1.ರಿಂದ 4 ರವರು ವಾಟ್ನಿ ಮಾಡಿಕೊಂಡಿದ್ದು , ಸಮನಾದ ಪಾಲು ಬಂದಿರುತ್ತದೆ. ಮೇಲ್ಮನವಿದಾರರು ತನ್ನ ಪಾಲಿಗೆ ಬಂದಿದ್ದ ಆಸ್ತಿಯನ್ನು ಪ್ರತಿವಾದಿ ನಂ.7 ರವರಿಗೆ ನೊಂದಾಯಿತ ದಸ್ತಾವೇಜಿನ ಮೂಲಕ ಬಿಟ್ಟುಕೊಟ್ಟಿರುತ್ತಾರೆ. ಪ್ರತಿವಾದಿಯರ ಪಾಲಿಗೆ ಬಂದಿರುವ ಜಮೀನನ್ನು ಎತ್ತಿಹಾಕಲು ಈಗ ಈ ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ಹೇಳುತ್ತಾ ಅರ್ಜಿಯನ್ನು ತಿರಸ್ಕರಿಸುವಂತೆ ಪ್ರಾರ್ಥಿಸಿರುತ್ತಾರೆ.

3. ನನ್ನ ಪರಿಗಣನೆಗೆ ಈ ಕೆಳಗಿನ ಅಂಶಗಳು ಉದ್ಭವಿಸುತ್ತವೆ.

1. ದಾವೆಯು ಮೇಲ್ನೋಟಕ್ಕೆ ಉತ್ತಮವಾದ ದಾವೆ ಎಂದು ಮೇಲ್ಮನವಿದಾರರು ರುಜುವಾತುಪಡಿಸುವರೇ ?

2. ದಾವೆಯಲ್ಲಿ ಅನುಕೂಲತೆಯ ಒಲವು ತನ್ನ ಪರ ಇದೆ ಎಂದು ಮೇಲ್ಮನವಿದಾರರು ರುಜುವಾತುಡಿಸುವರೇ?

3. ಅರ್ಜಿಯನ್ನು ಪುರಸ್ಕರಿಸದಿದ್ದರೆ ತನಗೆ ತುಂಬಲಾರದ ನಷ್ಟ ಉಂಟಾಗುತ್ತದೆಂದು ಮೇಲ್ಮನವಿದಾರರು ರುಜುವಾತುಪಡಿಸುವರೇ ?

4. ಯಾವ ಆದೇಶ ?

4. ಉಭಯ ಪಕ್ಷಗಾರರ ವಾದವನ್ನು ಆಲಿಸಿದ್ದೇನೆ ಮತ್ತು ದಾಖಲೆಗಳನ್ನು ಪರಿಶೀಲಿಸಿದ್ದೇನೆ .

5. ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದ್ದೇನೆ.

ಅಂಶ.ನಂ:.1 ರಿಂದ 3 : ಸಕಾರಾತ್ಮಕವಾಗಿ

ಅಂಶ.ನಂ. 4 : ಅಂತಿಮ ಆದೇಶದಂತೆ,
ಈ ಕೆಳಗಿನ ಕಾರಣಗಳಿಗಾಗಿ.

**ಕಾರಣಗಳು ಃ**

**6. ಅಂಶ ನಂ.1 ರಿಂದ 3 ಃ** ಈ ಮೂರು ಅಂಶಗಳು ಒಂದಕ್ಕೊಂದು ಅಂತರ ಸಂಬಂಧವನ್ನು ಹೊಂದಿದ್ದು, ಸಮಾನ ಚರ್ಚೆಯಿಂದ ನಿರ್ಧರಿಸಬೇಕಾಗಿರುವುದರಿಂದ , ಚರ್ಚೆಯ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಒಟ್ಟಾಗಿ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ವಾದಿಯರು ದಾವಾ ಆಸ್ತಿ ಜಾಲವಾದ ಗ್ರಾಮದ ಸ.ನಂ.199/2 ಕ್ಷೇತ್ರ 04 ಎಕರೆ 16 ಗುಂಟೆ , ಸ.ನಂ.155/1 ಕ್ಷೇತ್ರ 05 ಎಕರೆ , ಸ.ನಂ.155/2 ಕ್ಷೇತ್ರ 04 ಎಕರೆ 20 ಗುಂಟೆ , ಸ.ನಂ.155/3 ಕ್ಷೇತ್ರ 04 ಎಕರೆ 26 ಗುಂಟೆ , ಸ.ನಂ.155/4 ಕ್ಷೇತ್ರ 08 ಎಕರೆ 00 ಗುಂಟೆ ಮತ್ತು ಸ.ನಂ.155/5 ಕ್ಷೇತ್ರ 06 ಎಕರೆ 00 ಗುಂಟೆ , ಹೀಗೆ ಒಟ್ಟು 28 ಎಕರೆ 06 ಗುಂಟೆ ಜಮೀನಿಗೆ ಸಂಬಂಧಿಸಿ ಪ್ರತಿವಾದಿಯರ ವಿರುದ್ಧ ಈ ದಾವೆಯನ್ನು ಸಲ್ಲಿಸಿ , ದಾವಾ ಆಸ್ತಿಗಳಲ್ಲಿ ತಮಗೆ 1/2 ಪಾಲನ್ನು ಮಂಜೂರು ಮಾಡಬೇಕೆಂದು ಪ್ರಾರ್ಥಿಸಿದ್ದರು.

ಸಂಪೂರ್ಣ ವಿಚಾರಣೆಯ ನಂತರ ವಾದಿಯರ ದಾವೆಯು ವಜಾಗೊಂಡಿರುತ್ತದೆ. ಸದರಿ ವಜಾಗೊಂಡ ಆದೇಶದ ವಿರುದ್ಧ ವಾದಿಯರು ಈ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ವಿಚಾರಣೆ ನ್ಯಾಯಾಲಯವು ವಿವಾದಾಂಶ ನಂ.1 ನ್ನು ಉತ್ತರಿಸುತ್ತಾ , ದಾವಾ ಆಸ್ತಿಗಳು ವಾದಿಯರು ಮತ್ತು ಪ್ರತಿವಾದಿ ನಂ.1 ರಿಂದ 6 ರವರ ಏಕತ್ರ ಕುಟುಂಬದ ಆಸ್ತಿಗಳಲ್ಲ ಸ್ಪಷ್ಟವಾಗಿ ಹೇಳಿರುತ್ತಾರೆ. ಮೂಲ ವಾದಿಯಾದ ಕಲ್ಲಪ್ಪರವರು ಈ ದಾವೆ ದಾಖಲಾದ ನಂತರ ಮರಣ ಹೊಂದಿದ್ದು, ಅವರ ವಾರಸುದಾರರು ವಾದಿ ನಂ.1 ಎ ದಿಂದ 1 ಇ ಎಂದು ಪಕ್ಷಗಾರರಾಗಿ ಸೇರಿರುತ್ತಾರೆ.

7. ವಾದಿಯು ತನ್ನ ವಾದ ಪತ್ರದಲ್ಲಿ ಈ ಕೆಳಗಿನಂತೆ ಃ-

> " ಈ ಜಮೀನುಗಳು ವಾದಿ ಪ್ರತಿವಾದಿಯರ ಮನೆತನದ ಏಕತ್ರ ಕುಟುಂಬದ ಆಸ್ತಿಗಳು ಇದ್ದು , ಇವು ವಾದಿ ಪ್ರತಿವಾದಿಯರ ಸಾಮೂಹಿಕ ಕಬ್ಜಾವಹಿವಾಟಿಯಲ್ಲಿ ಇರುತ್ತವೆ."
> "ವಾದಿಗೆ ಪ್ರತಿವಾದಿ ನಂ.1 ರಿಂದ 4 ನೇ ಪ್ರತಿವಾದಿಯರು ಚಿಕ್ಕಪ್ಪನ ಮಕ್ಕಳಾಗಬೇಕು , 5 ನೇ ಪ್ರತಿವಾದಿ ಚಿಕ್ಕಪ್ಪನ ಮಗಳಾಬೇಕು , 6 ನೇ ಪ್ರತಿವಾದಿ ಅತ್ತಿಗೆಯಾಗಬೇಕು ಅಂದರೆ 1 ನೇ ಪ್ರತಿವಾದಿಯ ಹೆಂಡತಿ ಇರುತ್ತಾಳೆ. 7 ನೇ ಪ್ರತಿವಾದಿ ಅಕೃತಿಮ ಖರೀದಿದಾರಳು ಇರುತ್ತಾಳೆ. "
> ಎಂದು ಹೇಳಿರುತ್ತಾರೆ.

ವಿಚಾರಣೆ ನ್ಯಾಯಾಲಯದ ಮುಂದೆ ದಾವಾ ಆಸ್ತಿಗಳು ವಾದಿಯರ ಮತ್ತು ಪ್ರತಿವಾದಿ ನಂ.1 ರಿಂದ 6 ರವರ ಏಕತ್ರ ಕುಟುಂಬದ ಆಸ್ತಿಗಳೆಂದು ರುಜುವಾತುಪಡಿಸಲು ವಾದಿಯರು ವಿಫಲರಾಗಿರುತ್ತಾರೆ. ವಿಚಾರಣೆ ನ್ಯಾಯಾಲಯದ ತೀರ್ಪಿನ ವಿರುದ್ಧ ಈ ಮೇಲ್ಮನವಿಯನ್ನು ವಾದಿಯರು ಸಲ್ಲಿಸಿರುತ್ತಾರೆ. ವಾದಿಯರು ಮತ್ತು ಪ್ರತಿವಾದಿಯರ ನಡುವಿನ ಸಂಬಂಧವನ್ನು ಪರಿಗಣಿಸಿದಾಗ ದಾವಾ ಆಸ್ತಿಗಳಿಗೆ ಸಂಬಂಧಿಸಿ ವಾದಿಯರ

ಹಕ್ಕೋತ್ತಾಯದ ಬಗ್ಗೆ ಈ ಮೇಲ್ಮನವಿಯಲ್ಲಿ ವಿಚಾರಣೆ ನ್ಯಾಯಾಲಯದ ತೀರ್ಪು ಮತ್ತು ಕಡತದಲ್ಲಿ ಇರುವ ಮೌಖಿಕ ಮತ್ತು ಲೇಖಿ ಸಾಕ್ಷ್ಯವನ್ನು ಪ್ರಶಂಸಿಸುವ ಅವಶ್ಯಕತೆ ಇರುವುದು ಕಂಡುಬರುತ್ತದೆ. ಈ ಮೇಲ್ಮನವಿಯ ಅವಧಿಯಲ್ಲಿ ಪ್ರತಿವಾದಿಯರು ದಾವಾ ಆಸ್ತಿಗಳನ್ನು ಪರಭಾರೆ ಮಾಡಿದರೆ ವಾದಿಯರಿಗೆ ತೊಂದರೆ ಉಂಟಾಗಲಿದೆ. ಈಗಾಗಲೇ ಸುಮಾರು 25 ರಿಂದ 30 ವರ್ಷಗಳ ಹಿಂದೆ ದಾವಾ ಆಸ್ತಿಗಳಲ್ಲಿ ವಾಟ್ನಿಯಾಗಿದೆ ಎಂದು ಪ್ರತಿವಾದಿಯರು ಹೇಳಿರುತ್ತಾರೆ. ಈ ಎಲ್ಲ ವಿಚಾರಗಳ ಬಗ್ಗೆ ಈ ಮೇಲ್ಮನವಿಯಲ್ಲಿ ಪುನಃ ಪ್ರಶಂಸಿಸುವ ಅವಶ್ಯಕತೆ ಇರುವುದರಿಂದ ಈ ಹಂತದಲ್ಲಿ ವಾದಿಯರ ಪರವಾಗಿ ಮೇಲ್ನೋಟಕ್ಕೆ ಉತ್ತಮವಾದ ಪ್ರಕರಣ ಮತ್ತು ಅನುಕೂಲತೆಯ ಒಲವು ಇರುವುದು ಸ್ಪಷ್ಟವಾಗುತ್ತದೆ. ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸದಿದ್ದರೆ ವಾದಿಯರಿಗೆ ತೊಂದರೆ ಉಂಟಾಗಲಿದೆ. **ಅಂತೆಯೇ ಅಂಶ ನಂ.1 ರಿಂದ 3 ನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.**

8 **<u>ಅಂಶ.ನಂ. 4 :</u>** ಅಂಶ ನಂ. 1 ರಿಂದ 3 ಕ್ಕೆ ನೀಡಿರುವ ಕಾರಣ ಮತ್ತು ಉತ್ತರಕ್ಕೆ ಅನುಗುಣವಾಗಿ ಈ ಕೆಳಗಿನಂತೆ ಆದೇಶಿಸಲಾಗಿದೆ.

**<u>ಆದೇಶ</u>**

ಮೇಲ್ಮನವಿದಾರರು/ ಅರ್ಜಿದಾರರು ಸಿ.ಪಿ.ಸಿ ಕ್ರಮಾದೇಶ 39 ನಿಯಮ 1 ಮತ್ತು 2 ರನ್ವಯ ಸಲ್ಲಿಸಿರುವ ಮಧ್ಯಂತರ ಅರ್ಜಿ ನಂ.1 ನ್ನು ಪುರಸ್ಕರಿಸಲಾಗಿದೆ.

ಈ ಮೇಲ್ಮನವಿಯ ವಿಲೇಯವರೆಗೆ ದಾವಾ ಆಸ್ತಿಗಳನ್ನು ಪರಭಾರೆ ಮಾಡದಂತೆ ಪ್ರತಿವಾದಿ ನಂ.1 ರಿಂದ

7 ರವರ ವಿರುದ್ಧ ತಾತ್ಕಲಿಕ ನಿರ್ಬಂಧಕಾಜ್ಞೆಯನ್ನು ನೀಡಲಾಗಿದೆ.

ಮೇಲ್ಮನವಿದಾರರು ಮತ್ತು ಎದುರುದಾರರು ಈ ಮೇಲ್ಮನವಿಯನ್ನು ಶೀಘ್ರವಾಗಿ ನಿರ್ಧರಿಸುವಲ್ಲಿ ನ್ಯಾಯಾಲಯದ ಜೊತೆ ಸಹಕರಿಸತಕ್ಕದ್ದು.

(ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರದಲ್ಲಿ ಉಕ್ತಲೇಖನವನ್ನು ಕೊಟ್ಟು ಬೆರಳಚ್ಚು ಮಾಡಿದ ನಂತರ ಪರಿಶೀಲಿಸಿ, ಸಹಿ ಮಾಡಿ ದಿನಾಂಕ 1 ನೇ ಜುಲೈ- 2026 ರಂದು ತೆರೆದ ನ್ಯಾಯಾಲಯದಲ್ಲಿ ಆದೇಶವನ್ನು ಉಚ್ಚರಿಸಲಾಯಿತು)

**ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು.**